

# ಬಂಗಾರದ ಬಟ್ಟಲು!

■ ಚಿತ್ರ– ಬರಹ: **ಪದ್ಮಾ ಶ್ರೀರಾಮ**

ಅರಳಿದಾಗ ದೊಡ್ಡ ಬಂಗಾರದ ಬಟ್ಟಲಿನಂತೆ ಕಾಣಿಸುವ ಹೂವೇ ಸೊಲಾಂಡ್ರ ಮ್ಯಾಕ್ಸಿಮಾ ಅಥವಾ ಕಪ್ ಆಫ್ ಗೋಲ್ಡ್. ಮೊಗ್ಗಿನ ಅವಸ್ಥೆಯಲ್ಲಿ ದೊಡ್ಡ ಮೊಟ್ಟೆಯಂತಿದ್ದು, ಅರಳಿದಾಗ ಒಂದು ದೊಡ್ಡ ಗಾತ್ರದ ತುತ್ತೂರಿ ಆಕಾರ ತಾಳಿ, ಒಳಗೆ ದಳಗಳ ಮೇಲೆ ನೇರಳೆ ಬಣ್ಣದ ಗೆರೆಗಳೂ, ಕೇಸರಗಳೂ ಇದ್ದು ನೋಡುಗರ ಮನದಲ್ಲಿ ಕೀಳಬೇಕೆಂಬ ಉತ್ಕಟ ಆಶೆಯನ್ನು ಮೂಡಿಸುತ್ತದೆ.

ನಮ್ಮಲ್ಲಿ ಕಂಡು ಬರುವ ಅನೇಕ ಅಲಂಕಾರಿಕ ಸಸ್ಯಗಳು, ಸಾಲುಮರಗಳು ಬೇರೆ ದೇಶಗಳಿಂದ ನಮ್ಮಲ್ಲಿಗೆ ಬಂದಂತಹವು. ಹಾಗೆಯೇ ಆಕರ್ಷಕ ಬಣ್ಣ ಗಾತ್ರಗಳ ಸೊಲಾಂಡ್ರ ಹೂವಿನ ಬಳ್ಳಿ ಮೆಕ್ಸಿಕೊದಿಂದ ನಮ್ಮಲ್ಲಿಗೆ ಬಂದಿದೆ. ಸೊಲನೇಸಿ ಸಸ್ಯ ಕುಟುಂಬಕ್ಕೆ ಸೇರಿದ ಸೊಲಾಂಡ್ರ ನಾವು ದಿನನಿತ್ಯ ಉಪಯೋಗಿಸುವ ಬದನೆ, ಟೊಮ್ಯಾಟೊ, ಮೆಣಸಿನಕಾಯಿ ಸಸ್ಯಗಳ ಸೋದರಿ.

ಸಸ್ಯಶಾಸ್ತ್ರದ ಪಿತಾಮಹ ಲಿನೇಯಸ್‌ನ ಪ್ರಿಯ ಶಿಷ್ಯ ಡ್ಯಾನಿಯಲ್ ಕಾರ್ಲ್ ಸೊಲ್ಯಾಂಡರ್‌ನ ಗೌರವಾರ್ಥ ಮತ್ತು ಹೂವಿನ ಗಾತ್ರ ಸೂಚಕವಾಗಿ ಈ ಬಳ್ಳಿಗೆ ಸೊಲಾಂಡ್ರ ಮ್ಯಾಕ್ಸಿಮಾ ಎಂಬ ಹೆಸರು ಕೊಡಲಾಯಿತು. ಹೀಗೆ ಸಸ್ಯಶಾಸ್ತ್ರಜ್ಞರ, ಪ್ರಸಿದ್ಧ ವ್ಯಕ್ತಿಗಳ ಹೆಸರುಗಳನ್ನು ಸಸ್ಯಗಳಿಗೆ ಕೊಡುವುದು ಪಾಶ್ಚಾತ್ಯ ದೇಶಗಳಲ್ಲಿ ಒಂದು ಪರಂಪರೆಯಾಗಿ ಬೆಳೆದಿದೆ.

ನಮ್ಮಲ್ಲೂ ಇದೆ: ಅನೇಕ ವರ್ಷಗಳ ಹಿಂದೆ ಸುಪ್ರಸಿದ್ಧ ಲಾಲ್‌ಬಾಗ್‌ನ ಮುಖ್ಯಸ್ಥರಾಗಿದ್ದ ಮರಿಗೌಡರು ಲಾಲ್‌ಬಾಗ್‌ನಲ್ಲಿ ಕೆಲಸ ಮಾಡುತ್ತಿದ್ದ ತಿಮ್ಮ ಎಂಬ ಮಾಲಿಯ ಗೌರವಾರ್ಥ ಒಂದು ಗುಲಾಬಿ ಬಣ್ಣದ ಹೂವಿನ ಬೊಗೆನ್‌ವಿಲ್ಲಾ ಬಳ್ಳಿಗೆ ಬೊಗೆನ್ ವಿಲ್ಲಾ ತಿಮ್ಮ ಎಂಬ ಹೆಸರನ್ನು ಕೊಟ್ಟು ಗೌರವಿಸಿದ್ದರು. ●

